(ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)

# ಕಾರ್ಯಪಾಲಕ ಅಭಿಯಂತರರವರ ಕಛೇರಿ

ಚಾಮರಾಜನಗರ ವಿಭಾಗ, ಚಾಮರಾಜನಗರ.

ಸಂಖ್ಯೆ/ಕಾಇಂ/ಲೋಬಂಮತ್ತುಒಜಇ/ಚಾವಿಚಾ/ಓ.ಎಫ್.ಸಿ.ಕೇಬಲ್/ಅನುಮತಿ/ಸ.ಇಂ-1/2020-21/53-54 07/05/2020

ರವರಿಗೆ,

ಜಿಯೋ ಡಿಜಿಟಲ್ ಫೈಬರ್ ಪ್ರೈ.ಲಿಮಿಟೆಡ್,
ಆರ್.ಎಂ.ಜಡ್ ಏಕಾನ್,
ನಂ.52 ಪ್ಯಾಲೆಸ್ ರಸ್ತೆ ತಿರುವು,
ವಸಂತನಗರ,
ಬೆಂಗಳೂರು.+

ಮಾನ್ಯರೇ,

**ವಿಷಯ:**- ಕೊಳ್ಳೇಗಾಲ ತಾಲ್ಲೂಕು ಕೊಳ್ಳೇಗಾಲ ತಾಲ್ಲೂಕು ರಾಮಾಪುರ-ವಡಕೆಹಳ್ಳ ರಸ್ತೆ ಸ.0.00 ಯಿಂದ 63.00 ಕಿ.ಮೀವರೆಗೆ ಜಿಯೋ ಆಪ್ಟಿಕ್ ಫೈಬರ್ ಕೇಬಲ್ ಅಳವಡಿಸಲು ಟ್ರಂಚ್ ತೆಗೆಯಲು ಅನುಮತಿ ನೀಡುವ ಬಗ್ಗೆ.

**ಉಲ್ಲೇಖ:**-1) ತಮ್ಮ ಕಛೇರಿ ಪತ್ರ ಸಂಖ್ಯೆ:JDFPL/OFC/ROW/NLD7AG4/RAMAPURA MARTALLI/PWD/001, Dated: 16.11.2019.
2) ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಮಹದೇಶ್ವರಬೆಟ್ಟ ಉಪವಿಭಾಗ, ಮಹದೇಶ್ವರಬೆಟ್ಟ ರವರ ಪತ್ರ ಸಂಖ್ಯೆ:292, ದಿನಾಂಕ:20.11.2019.
3) ತಮ್ಮ ಕಛೇರಿ ಪತ್ರ ಸಂಖ್ಯೆ:JDFPL/OFC/ROW/NLD7AG4/RAMAPURA MARTALLI/PWD/DD/003, Dated: 10.12.2019.
4) ತಮ್ಮ ಕಛೇರಿ ಪತ್ರ ಸಂಖ್ಯೆ:JDFPL/OFC/ROW/NLD7AG4/RAMAPURA MARTALLI/PWD/BG/005, Dated: 17.12.2019.

*****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರ ಪತ್ರದಲ್ಲಿ ಕೊಳ್ಳೇಗಾಲ ತಾಲ್ಲೂಕು ರಾಮಾಪುರ-ವಡಕೆಹಳ್ಳ ರಸ್ತೆಯಲ್ಲಿ ಆಪ್ಟಿಕ್ ಫೈಬರ್ ಕೇಬಲ್ ಅಳವಡಿಸಲು ಅನುಮತಿ ನೀಡಲು ಕೋರಿರುತ್ತೀರಿ.

ಅದರಂತೆ ಕೊಳ್ಳೇಗಾಲ ತಾಲ್ಲೂಕು ರಾಮಾಪುರ-ವಡಕೆಹಳ್ಳ ರಸ್ತೆ ಸ.0.00 ಯಿಂದ 63.00 ಕಿ.ಮೀವರೆಗೆ ರಿಲಾಯನ್ಸ್ ಆಪ್ಟಿಕ್ ಫೈಬರ್ ಕೇಬಲ್ ಅಳವಡಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಪರವಾನಗಿ ನೀಡಲಾಗಿದೆ.

1. ಕೇಬಲ್‌ನ್ನು ಅಳವಡಿಸಲು ರೈಟ್ ಆಫ್ ವೇ ಗೊಳಪಟ್ಟು (ROW) ಹಾಕಿಕೊಳ್ಳತಕ್ಕದ್ದು.
2. ಕೇಬಲ್‌ನ ಮೇಲ್ಮೈಯು ಕನಿಷ್ಠ ಅಂದಾಜಿನಲ್ಲಿ ಸೂಚಿಸಿರುವಂತೆ 1.60 ಮೀನಲ್ಲಿ ಇರತಕ್ಕದ್ದು.
3. ಇಲಾಖೆಯ ರಸ್ತೆಯ ಡಾಂಬರ್ ಮೇಲ್ಮೈಗೆ, ಸೈನ್ ಬೋರ್ಡಿಗೆ ಕಿ.ಮೀ ಕಲ್ಲುಗಳಿಗೆ ಮತ್ತು ಪೋಲ್ಡರಿಗೆ ಯಾವುದೇ ಹಾನಿ ಮಾಡತಕ್ಕದ್ದಲ್ಲ.
4. ಕೇಬಲ್ ಹಾಕುವ ಕಂಪನಿಯವರು ಕಲ್ವರ್ಟ್, ನದಿ ಹಾಗೂ ಇತರೆ ಕ್ರಾಸ್ ರೋಡ್‌ಗಳನ್ನು ಕ್ರಾಸ್ ಮಾಡಲು ತಮ್ಮದೇ ಆದ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕದ್ದು.
5. ಕೇಬಲ್‌ನ್ನು ಮುಂಗಾರು ಮಳೆಗಾಲ ಮುಗಿದ ನಂತರ ಹಾಕತಕ್ಕದ್ದು.
6. ಕೇಬಲ್‌ನ್ನು ಹಾಕಲು ಮಣ್ಣನ್ನು ಅಗೆಯುವುದಕ್ಕಿಂತ ಮುಂಚೆ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರ ಗಮನಕ್ಕೆ ತಂದು ಮಾಡತಕ್ಕದ್ದು.
7. ಕೇಬಲ್ ಹಾಕುವಾಗ ಏನಾದರೂ ಅಪಘಾತವಾದಲ್ಲಿ ಸದರಿ ಅಪಘಾತದ ಹಾನಿಯನ್ನು ಸಂಪೂರ್ಣವಾಗಿ ಕಂಪನಿಯವರೇ ಭರಿಸತಕ್ಕದ್ದು.
8. ಕೇಬಲ್ ಹಾಕುವಾಗ ಯಾವುದೇ ಕಾರಣಕ್ಕೂ ವಾಹನಗಳ ಸುಗಮ ಸಂಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವುದು.

9. ಪ್ರತಿದಿನ ತೆಗೆದ ಹಳ್ಳವನ್ನು ಅಂದೇ ಕೇಬಲ್ ಹಾಕಿ ಸೂಕ್ತವಾದ ಮಣ್ಣನ್ನು ಹಾಕಿ ಮುಚ್ಚುವುದು.
10. ಕೇಬಲ್‌ನ್ನು ಹಾಕುವಾಗ ಇತರೇ ಕಂಪನಿಯವರು ಹಾಗೂ ಬಿ.ಎಸ್.ಎನ್.ಎಲ್ ಕಂಪನಿಯವರು ಹಾಗೂ ನೀರು ಸರಬರಾಜು ಪೈಪುಗಳಿಗೆ ಯಾವುದೇ ಡ್ಯಾಮೇಜ್ ಆಗದಂತೆ ನೋಡಿಕೊಳ್ಳುವುದು.
11. ಕೇಬಲ್ ಹಾಕಲು ನೀಡಿದ ಪರವಾನಗಿಯನ್ನು ಯಾವುದೇ ಕಾರಣಕ್ಕೂ ಕೇಬಲ್ ಹಾಕಲು ಬಿಟ್ಟು ಬೇರೆ ಕಾರಣಕ್ಕೆ ಉಪಯೋಗಿಸಬಾರದು.
12. ರೂ.100.00 ಸ್ಟಾಂಪಿನಲ್ಲಿ ಮೇಲಿನ ಕರಾರುಗಳನ್ನು ಮಾಡಿಕೊಳ್ಳತಕ್ಕದ್ದು.
13. ಮೇಲಿನ ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದಲ್ಲಿ ಪರವಾನಗಿಯು ತತ್‌ಕ್ಷಣ ರದ್ದಾಗುವುದು.

ತಮ್ಮ ನಂಬುಗೆಯ,

ಕಾರ್ಯಪಾಲಕ ಇಂಜಿನಿಯರ್.
ಲೋ.ಬಂ.ಮತ್ತು ಒ.ಜ.ಸಾ.ಇ ವಿಭಾಗ,
ಚಾಮರಾಜನಗರ.
6/8/2020